# ನಕ್ಕುಬಿಡಿ..!



## ಗುರು-ಶಿಷ್ಯ ಸಂವಾದ

ಮೇಷ್ಟ್ರು: ಗುರು-ಶಿಷ್ಯರಲ್ಲಿ ಯಾರು ಬುದ್ಧಿವಂತರು?

ವಿದ್ಯಾರ್ಥಿ: ಶಿಷ್ಯನೇ ಬುದ್ಧಿವಂತ.

ಮೇಷ್ಟ್ರು: ಅದು ಹೇಗೆ?

ವಿದ್ಯಾರ್ಥಿ: ರೇಡಿಯೋ ಕಂಡು ಹಿಡಿದವರು ಯಾರು ಸಾರ್?

ಮೇಷ್ಟ್ರು: ಮಾರ್ಕೋನಿ.

ವಿದ್ಯಾರ್ಥಿ: ಅವನ ಗುರುಗಳೇ ಬುದ್ಧಿವಂತರಾಗಿದ್ದರೆ, ಅವರ ಕೈಯಲ್ಲಿ ಏಕೆ ಕಂಡು ಹಿಡಿಯಲು ಆಗಲಿಲ್ಲ?

★★★



ಶಿಲ್ಪಾ

ಗುರು: ಏನಯ್ಯಾ ಬಾವಿಗೆ ಇಳಿದು ಏನ್ ಮಾಡುತ್ತಿದ್ದೀಯಾ?

ಶಿಷ್ಯ: ನೀವೇ ಹೇಳಿದರಲ್ಲಾ ಸಾರ್, ಯಾವುದೇ ವಿಷಯ ಆದ್ರೂ ಆಳವಾಗಿ ಅಧ್ಯಯನ ಮಾಡಬೇಕು ಅಂತ. ಅದಕ್ಕೇ ಇಳಿದಿದ್ದೀನಿ.

★★★

ಗುರು: ವರ್ತಮಾನ ಕಾಲಕ್ಕೆ ಒಂದು ಉದಾಹರಣೆ ಕೊಡು?

ಶಿಷ್ಯ: ನಾನು ಆಕೆ ಯನ್ನು ಪ್ರೀತಿಸುತ್ತಿದ್ದೇನೆ.

ಗುರು: ಭವಿಷ್ಯತ್ ಕಾಲಕ್ಕೆ ಒಂದು ಉದಾಹರಣೆ ಕೊಡು?

ಶಿಷ್ಯ: ಅವಳು ಸದ್ಯದಲ್ಲೇ ಅಮ್ಮನಾಗುತ್ತಾಳೆ.

★★★

ಗುರು: ಲೀವ್ ಲೆಟರ್‌ಗೂ ಲವ್ ಲೆಟರ್‌ಗೂ ಏನ್ ವ್ಯತ್ಯಾಸ.

ಶಿಷ್ಯ: ನಿಮಗೆ ಕೊಡೋದು ಲೀವ್ ಲೆಟರ್, ನಿಮ್ಮ ಮಗಳಿಗೆ ಕೊಡೋದು ಲವ್ ಲೆಟರ್ ಸಾರ್!



ಹೂಗಾರ್

★★★

ಗುರು: ಎಲ್ಲರೂ ಕ್ರಿಕೆಟ್ ಪಂದ್ಯದ ಮೇಲೆ ಪ್ರಬಂಧ ಬರೆಯಿರಿ ಎಂದರು. ಮಂಟಾ ಏನನ್ನೂ ಬರೆಯದೆ ಸುಮ್ಮನೆ ಕುಳಿತಿದ್ದ.

ಗುರು: ಏಕೆ ಪ್ರಬಂಧ ಬರೆಯದೆ ಸುಮ್ಮನೆ ಕುಳಿತಿದ್ದೀಯಾ?

ಮಂಟಾ: ಮಳೆಯಿಂದ ಪಂದ್ಯ ರದ್ದಾಗಿದೆ ಸಾರ್!

★ ಎಂ.ಎಸ್.ಧರ್ಮೇಂದ್ರ

